# ‘ಆ ಕಾಲ ಅನ್ನುವುದು ಈಗ ನಿನ್ನ ಮಗನಾಗಿ ಹುಟ್ಟಿದೆಯಲ್ಲಪ್ಪಾ’



**ವ್ಯಾಸ:** ಅಪ್ಪಾ ರಾಜಾ,

ನಿನ್ನ ಮಕ್ಕಳನ್ನೂ ಅಷ್ಟೇಕೆ ರಾಜರೆಲ್ಲರನ್ನೂ ಕಾಲ ಬಳಸು ಹಾಕಿಕೊಂಡು ಬಿಟ್ಟಿದೆ. ಒಬ್ಬರಿಗೊಬ್ಬರು ಹಿಂಸೆ ಮಾಡಿ ಹೊಡೆದಾಡಿಕೊಂಡು ಸಾಯುತ್ತಾರೆ

ಹೀಗೆ ಕಾಲದ ಒಡ್ಡಿಗೆ ಸಿಕ್ಕಿಹಾಕಿಕೊಂಡವರನ್ನ, ಹಾಳಾಗಿ ಹೋಗುವವರನ್ನ ನೆನೆದುಕೊಂಡು ದುಃಖಮಾಡುವುದಿಲ್ಲ ಎಂದು ಮನಸ್ಸನ್ನ ಗಟ್ಟಿ ಮಾಡಿಕೋ.

ಇದನ್ನೆಲ್ಲ ಕಣ್ಣಾರೆ ನೋಡಬೇಕು ಎಂದು ಆಸೆಯಾದರೆ ಹೇಳು ಮಗೂ

ಈ ಯುದ್ಧವನ್ನೆಲ್ಲ ಕಾಣುವಂಥ ಕಣ್ಣು ಕೊಡುತ್ತೇನೆ

**ಧೃತರಾಷ್ಟ್ರ:** ದಾಯಾದಿಗಳ ಕೊಲೆಯನ್ನು ಕಾಣುವ ರುಚಿಯಿಲ್ಲ ನನಗೆ. ಯುದ್ಧದಲ್ಲಿ ನಡೆಯುವುದನ್ನ ಚೂರೂ ಬಿಡದೆ ಕೇಳಿಸಿಕೊಡು.

**ವೈಶಂಪಾಯನ:** ಇವನಿಗೆ ಕಾಣುವುದು ಬೇಡ, ಎಲ್ಲವನ್ನೂ ಕೇಳಿಸಿಕೊಳ್ಳಬೇಕು

ಎಂದುಕೊಂಡ ವ್ಯಾಸ ಸಂಜಯನಿಗೆ ವರವನ್ನು ಕೊಟ್ಟ

**ವ್ಯಾಸ:** ನೋಡು ರಾಜಾ, ನಿನ್ನ ಈ ಸಂಜಯ ನಿನಗೆ ಯುದ್ಧವನ್ನೆಲ್ಲ ಹೇಳುತ್ತಾನೆ

ಅವನ ಕಣ್ಣಾಚೆಗೆ ಏನೂ ನಡೆಯುವುದಿಲ್ಲ. ಅವನಿಗೆ ಎಲ್ಲವೂ ಕಾಣುತ್ತದೆ.

ಎಲ್ಲವೂ ಗೊತ್ತಾಗುತ್ತದೆ. ಕಣ್ಣೆದುರಾಗಾಗಲಿ, ಗುಟ್ಟಾಗಿ ಆಗಲಿ, ರಾತ್ರಿಯಲ್ಲಿರಲಿ, ಹಗಲಲ್ಲಿರಲಿ, ಮನಸ್ಸೊಳಗೇ ನಡೆದದ್ದೂ ಕೂಡ ಈ ಸಂಜಯನಿಗೆ ಕಾಣುತ್ತದೆ.

ಯುದ್ಧಕ್ಕೆ ಸಿಲುಕದೆ ಓಡಾಡುತ್ತಿರುವ ಇವನನ್ನು

ಶಸ್ತ್ರಗಳು ಇರಿಯುವುದಿಲ್ಲ, ಇವನು ಸುಸ್ತಾಗಿ ಬಳಲುವುದೂ ಇಲ್ಲ.

ರಾಜಾ ನೀನು ಹುಲಿಯಂಥವನು. ದುಃಖಪಡುವುದು ಸರಿಯಲ್ಲ.

ಆಗುವುದನ್ನು ನಿಲ್ಲಿಸುವುದಕ್ಕಾಗದು ಎಂದು ಕಂಡಮೇಲೆ ಧರ್ಮ ಎಲ್ಲಿದೆಯೋ ಅಲ್ಲಿ ಜಯ ಎಂದುಕೊಂಡು ಸುಮ್ಮನಿರಬೇಕು.

ನಿನ್ನ ಮಕ್ಕಳು ಮತ್ತು ಪಾಂಡವರನ್ನು ಕಥನ ಮಾಡಿ ಲೋಕಕ್ಕೆಲ್ಲ ಹರಡಿ ಕೀರ್ತಿವಂತರನ್ನಾಗಿ ಮಾಡುತ್ತೇನೆ. ಚಿಂತೆಪಡಬೇಡ.

ಈ ಯುದ್ಧದಿಂದ ಮಹಾಕ್ಷಯವಂತೂ ಖಂಡಿತ

ಈಗಾಗಲೇ ಆ ಭಯದ ಸೂಚನೆಗಳು ಕಾಣುತ್ತಾ ಇವೆ.

ಹದ್ದು ಕಾಗೆ ಗಿಡುಗ ಬಕ ಮುಂತಾದ ಹೆಣ ತಿನ್ನುವ ಪಕ್ಷಿಗಳು ದೂರದ ಬೆಟ್ಟದಿಂದ ಸುತ್ತಲ ಮರಗಳಿಗೆ ಇಳಿದು ಯುದ್ಧಕ್ಕಾಗಿ ಆನಂದದಿಂದ ಕಾಯುತ್ತಿವೆ. ರಾತ್ರಿಯಾಯಿತು ಎಂದರೆ ಹಂದಿ ಬೆಕ್ಕು ಅರಚಾಡುತ್ತಾ ಆ ದನಿ ಅಂತರಿಕ್ಷವನ್ನೆಲ್ಲ ಆವರಿಸಿ ರಾತ್ರಿಯನ್ನ ಭಯಂಕರ ಮಾಡಿಬಿಡುತ್ತಿವೆ

ಹುಟ್ಟಿದಾವೆ ಜನಾರ್ಧನ

ಅವರ ವಿಷಯಕ್ಕೆ ನನ್ನ ಎದೆ ಪ್ರೀತೀಲಿ ಕಟ್ಟಿಹಾಕಿಕೊಂಡು ಬಿಟ್ಟಿದೆ ಕೃಷ್ಣ. ಸೂತರ ಜತೇಲೆ ಹಬ್ಬ ಮಾಡಿದೀನಿ ಯಜ್ಞ ಮಾಡಿದೀನಿ

ನಾನು ಕೊಟ್ರೂ ತಂದೂ ಮಾಡಿರೋದೆಲ್ಲ ಸೂತರಲ್ಲೇ ಇಡೀ ಭೂಮಿಗೋ ಹೊನ್ನಿನ ರಾಶಿಗೋ ಆಸೆಪಟ್ರೋ ಭಯಕ್ಕೋ ಅದನ್ನ ಸುಳ್ಳು ಮಾಡೋಕೆ ಇಷ್ಟ ಇಲ್ಲ ನನಗೆ ಧೃತರಾಷ್ಟ್ರನ ಮನೆತನದಲ್ಲಿ ದುರ್ಯೋಧನನ ಆಸರೆ ಪಡೆದೆ. ಹದಿಮೂರು ವರ್ಷ ಕಂಟಕ ಇಲ್ಲದೆ ರಾಜ್ಯ ಅನುಭವಿಸಿದೀನಿ. ನನ್ನ ನಂಬಿಕೊಂಡೇ ಪಾಂಡವರ ಮೇಲೆ ಯುದ್ಧ ಮಾಡೋಕೆ. ಶಸ್ತ್ರ ಎತ್ತಿಕೊಂಡು ನಿಂತಿದಾನೆ ದುರ್ಯೋಧನ ಸವ್ಯಸಾಚೀನ ಎದುರಿಸೋದಕ್ಕೆ ನಾನೊಬ್ಬನೇ ಸರಿ ಅಂತ ಆರಿಸಿಕೊಂಡಿದಾನೆ. ಸತ್ತು ಹೋಗತೀನಿ ಅಂತಲೋ, ನಂಟರು ಅಂತಲೋ, ಭಯಕ್ಕೋ, ಇಲ್ಲ ಆಸೆಗೋ

ಅವಿವೇಕಿಯಾದರೂ ಧೃತರಾಷ್ಟ್ರನ ಮಗನಿಗೆ ಎದುರಾಗಿ ನಿಲ್ಲುವುದು ಇಷ್ಟ ಇಲ್ಲ ನನಗೆ. ಅಕಸ್ಮಾತ್ತು ಆ ಸವ್ಯಸಾಚಿ ಎದುರಾಗಿ ನಾನೂ ರಥ ನಿಲ್ಲಿಸಲ್ಲ ಅನ್ನು ನನಗೆ ಪಾರ್ಥನಿಗೆ ಇಬ್ಬರಿಗೂ ಕೆಟ್ಟ ಹೆಸರು ಕಟ್ಟಿಟ್ಟದ್ದು

ನಿಜ

ಹಿತಕ್ಕೇ ಹೇಳಿದ್ದು ನೀನು

ನೀ ಹೇಳಿದ್ದನ್ನ ಪಾಂಡವರು ನಡಸೇ ತೀರತಾರೆ ಅನ್ನೋದರಲ್ಲೂ ಅನುಮಾನ ಇಲ್ಲ

ಕುಂತಿಗೆ ನಾನು ಮೊದಲು ಹುಟ್ಟಿದವನು ಅಂತ ತಿಳಿದರೆ ಮನಸನ್ನ ಹತೋಟಿಲಿಟ್ಟಿರೋ ಆ ರಾಜ, ರಾಜ್ಯಾನ ನನಗೇ ಬಿಟ್ಟುಬಿಡತಾನೆ

ಈ ದೊಡ್ಡ ರಾಜ್ಯ ನನಗೇ ಸಿಕ್ಕಿತು ಅನ್ನು

ಅದನ್ನ ನಾನು ದುರ್ಯೋಧನನಿಗೆ ಕೊಟ್ಟುಬಿಡತೇನೆ. ಅವನೇ ಆ ಯುಧಿಷ್ಠಿರ ಅವನು ಧರ್ಮಾತ್ಮ ಯಾವತ್ತಿಗೂ ರಾಜ ಆಗಿರಲಿ

ಧನಂಜಯನೇ ನಾಯಕ ಆಗಲಿ

ಭೀಮ ನಕುಲ ಸಹದೇವ, ದ್ರೌಪದಿಯ ಮಕ್ಕಳು ಎಲ್ಲಿದಾರೋ ಅವರಿಗೇ ಈ ನೆಲ

ಮೂರು ಲೋಕದಲ್ಲೇ ಪುಣ್ಯದ ಜಾಗ ಕುರುಕ್ಷೇತ್ರ ನಮ್ಮ ಮಾತು ಗುಟ್ಟಾಗಿ ಇಟಕೊಂಡು ಕುಂತೀ ಮಗನನ್ನ ನನ್ನ ಎದುರು ಯುದ್ಧಕ್ಕೆ ನಿಲ್ಲಿಸು. ಅಲ್ಲಿ ಆಯುಧದಿಂದ ಸಾಯತೀನಿ.

ಹೊಳೆ ಪರ್ವತಗಳು ಇರೋತನಕ ನನ್ನ ಹೆಸರು ಉಳಿಯೋ ಹಾಗೆ ಕೀರ್ತಿವಂತರಾದ ಕ್ಷತ್ರಿಯರು ಹೋರಾಡಿದ ಕತೇನ ಬ್ರಾಹ್ಮಣರು ಹಾಡೋ ಹಾಗೆ

ಪುಂಡರೀಕಾಕ್ಷ ನಾವೆಲ್ಲ ಸಾಯೋ ಹಾಗೆ ನಿನ್ನ ಕೆಲಸ ಜರುಗಲಿ. ■